“ನಿನ್ನ ಅನುಮಾನ ಸರಿಯಾಗೇ ಇದೆ. ಆ ಬಗ್ಗೆ ನಮ್ಗೆ ಅಲ್ಲಿಗೆ ಹೋದಾಗ ಗೊತ್ತಾಗಬಹುದು.”

ಕರಮಚಂದ ತಣ್ಣನೆಯಾಗಿ ಪ್ರತಿಕ್ರಿಯಿಸಿದ. ಆತ ಬೇರೇ ಯಾವುದೋ ದಿಕ್ಕಿನಲ್ಲಿ ಯೋಚಿಸ್ತಾ ಇದ್ದಂತೆ ತೋರಿತು.

★★★

ಮರುದಿನ ನಾವು ಕುಟ್ಟಯ್ಯನ ಎಸ್ಟೇಟಿಗೆ ಹೋದೆವು. ಕುಟ್ಟಯ್ಯ ನಮಗೆ ಚಿನ್ನಪ್ಪನನ್ನು ಪರಿಚಯಿಸಿ, ಕೆಲಸಗಾರರ ಕಾಟೇಜುಗಳಿರುವಲ್ಲಿಗೆ ಕರೆದೊಯ್ದ.

“ಇದು ರುದ್ರಮುನಿಯ ಕಾಟೇಜು. ಪ್ರತೀ ಕಾಟೇಜಿನಲ್ಲಿ ಮೂರು ಜನ ಇರುತ್ತಾರಾದರೂ, ರುದ್ರಮುನಿಯ ವರ್ತನೆ ಯಾರಿಗೂ ಇಷ್ಟವಾಗದ್ದರಿಂದ ಅವ್ನು ಒಬ್ನೇ ಇರ್ತಿದ್ದ. ಪಾರ್ಟಿ ಯಾವಾಗ್ಲೂ ಕುಡ್ದೇ ಇರೋನು...” ಮಾತು ಸೇರಿಸಿದವನು ಚಿನ್ನಪ್ಪ.

“ಮೊದಲಿನಿಂದ್ಲೂ ಕುಡಿತಿದ್ದನಾ?” ಪ್ರಶ್ನಿಸಿದ ಕರಮಚಂದ.

“ಮೊದ್ಲು ಕುಡಿತಾ ಇದ್ದ, ಆದ್ರೂ ಜಾಸ್ತಿಯಿರಲಿಲ್ಲ. ಆದ್ರೆ ಆ ಏಡುಕೊಂಡಲುವಿನಲ್ಲಿಗೆ ಹೋಗೋಕೆ ಶುರುಹಚ್ಕೊಂಡ ಮೇಲೆ ಕುಡಿತ ಜಾಸ್ತಿಯಾಯ್ತು. ಬಿಟ್ರೆ ಸಿಕ್ಕರೆ ಪೀಪಾಯಿ ಆಗಿಬಿಡ್ತಾನೆ ಆಸಾಮಿ.”

“ಏಡುಕೊಂಡಲುವಿನ ಸಂಪರ್ಕ ಹೇಗಾಯ್ತು ಅವ್ನಿಗೆ?”

“ಸರಿಯಾಗಿ ಗೊತ್ತಿಲ್ಲ. ಒಮ್ಮೆ ಕರ್ರಗಿನ ಆಸಾಮಿಯೊಬ್ಬ ಆಗಾಗ್ಗೆ ಬಂದು ಅವ್ನ ಜೊತೆ ಮಾತಾಡ್ತಾ ಇದ್ದ. ಅವ್ನೇ ಏಡುಕೊಂಡಲುನ ಹತ್ರ ಕರೆದೊಯ್ದ ಅಂತ ಹೇಳ್ತಾರೆ. ಕೆಲವರು ಹೇಳೋ ಪ್ರಕಾರ ಆ ಆಸಾಮಿ ಅದಕ್ಕೂ ಮುಂಚೆ ರುದ್ರಮುನಿಯ ಬಗ್ಗೆ ತುಂಬಾ ಜನರ ಹತ್ರ ವಿಚಾರಿಸಿದ್ದನಂತೆ! ಹಿಂದೆ ಮುಂದೆ ಇಲ್ಲದ ರುದ್ರಮುನಿಯ ಬಗ್ಗೆ ವಿಚಾರಿಸುವಂತಹದೇನಿದೆ? ಸೋಜಿಗದ ಸುದ್ದಿ...”

“ಆ ಮನುಷ್ಯ ಎಲ್ಲಿದ್ದಾನೆ ಗೊತ್ತೆ? ಅವ್ನ ಹೆಸರು?”

“ನಲ್ಲತಂಬಿ ಅಂತ ಅವ್ನ ಹೆಸರು ಅವನೆಲ್ಲಿದ್ದಾನೆ ಅಂತ ಗೊತ್ತಿಲ್ಲ. ಏಡುಕೊಂಡಲುವಿನ ಹತ್ರ ಹೋದಾಗ್ಲೂ ಅವ್ನು ಕಾಣಲಿಲ್ಲ. ಆದ್ರೆ ರುದ್ರಮುನಿ ಕಾಣೆಯಾದ ನಂತರ ಒಂದೆರಡು ಬಾರಿ ಬಂದಿದ್ದ ರುದ್ರಮುನಿಯನ್ನು ಹುಡುಕಿಕೊಂಡು! ರುದ್ರಮುನಿ ದುಡ್ಡು ಕೊಡೋದು ಬಾಕಿಯಿದೆ, ಹೇಳ್ದೆ ಕೇಳ್ದೆ ಓಡೋಗಿದ್ದಾನೆ ಅಂತ ನನ್ನ ಹತ್ರಾನೂ ಜಬರದಸ್ತಿ ಮಾತಾಡಿದ. ಯಾವ ದುಡ್ಡು ಅಂತ ಕೇಳಿದ್ದಕ್ಕೆ ಕುಡ್ದ ಬಾಟಲಿ ಕಾಸು ಅಂತ ಹೇಳ್ದ...”

“ಮತ್ತೆ ಉಚಿತವಾಗಿ ಕುಡಿತ ಅಂತ ಹೇಳಿದ್ದು...”

“ಹಾಂ. ರುದ್ರಮುನಿ ಷರತ್ತು ಪಾಲಿಸ್ಲಿಲ್ಲ ಅಂತ ಹೇಳ್ದ. ಕನಿಷ್ಠ ಮೂರು ತಿಂಗ್ಳು ಬರಲೇಬೇಕಂತೆ. ತಪ್ಪಿದ್ರೆ, ಕುಡ್ದ ದುಡ್ಡು ಕಕ್ಕಬೇಕಂತೆ.”

ರುದ್ರಮುನಿಯದ್ದು ಚಿಕ್ಕ ಕಾಟೇಜು. ಬಾಗಿಲಲ್ಲಿ ಹೊಸ ಬೀಗ ನೇತಾಡುತ್ತಿತ್ತು. ಬಾಗಿಲಲ್ಲಿ ಒಂದು ಕದ ತೀರಾ ಹಳೆಯದಾಗಿದ್ದರೆ, ಇನ್ನೊಂದು ಹೊಸತು. ಚಿನ್ನಪ್ಪ ಬೀಗ ತೆರೆದ. ನಾವು ಒಳಗಡಿಯಿರಿಸಿದೆವು.

ಪುಟ್ಟ ಚಾವಡಿ. ಪಕ್ಕದಲ್ಲಿ ಕಿಚನ್, ಅದಕ್ಕೆ ಅಂಟಿಕೊಂಡು ಬಚ್ಚಲು ಮತ್ತು ಟಾಯ್ಲೆಟ್. ಗೋಡೆಯ ಬದಿಯಲ್ಲಿ ಮರದ ಕಪಾಟೊಂದು ಇತ್ತು. ಕರಮಚಂದ ಅದನ್ನು ಆಸ್ಥೆಯಿಂದ ನಿರುಕಿಸಿದ.